ವಿಶೇಷ ಮತ್ತು ಹೆಚ್ಚುವರಿ ಸವಾಲುಗಳು ಇವೆ. ಆದರೆ ಹಲವಾರು ಸವಾಲುಗಳು ಪುರುಷ ಮತ್ತು ಮಹಿಳೆ ಇಬ್ಬರಿಗೂ ಒಂದೇ ರೀತಿಯಾಗಿವೆ. ನಾನು ಬಹಳ ಅದೃಷ್ಟವಂತೆ ಅನ್ನಬೇಕು. ಯಾಕಂದ್ರೆ ನಾನು ಈ ಕೊನೆಯಿಲ್ಲದ ಮತ್ತು ಅರ್ಥಹೀನ ಬದಲಾವಣೆಯನ್ನು ನಿರಾಕರಿಸಬಹುದಾದ ಸ್ಥಿತಿಯಲ್ಲಿದ್ದೇನೆ. ಅದರ ಬದಲು ನಾನು ಸೃಷ್ಟಿಸುವ ವಸ್ತುಗಳ ಗುಣಮಟ್ಟದ ಮೇಲೆ, ಅರ್ಥಪೂರ್ಣ ಕೆಲಸಗಳನ್ನು ಹುಡುಕಿ ಮಾಡುವುದರ ಮೇಲೆ, ನನ್ನ ಬಗ್ಗೆ ನಾನು ಚೆನ್ನಾಗಿ ಕಾಳಜಿ ವಹಿಸುವತ್ತ ಹೆಚ್ಚಿನ ಗಮನ ಕೊಡುತ್ತೇನೆ. ಇದು ಖಂಡಿತವಾಗಿಯೂ ಒಂದು ಕಲಿಕಾ ಪ್ರಕ್ರಿಯೆ. ಆ ಒಂದು ಹೆಚ್ಚುವರಿ ಹೊಣೆಗಾರಿಕೆಗೆ 'No' ಅನ್ನಲು ನಾನು ಕಲಿತೆ. ಸಾಮಾನ್ಯವಾಗಿ ನಾನು busy ಆಗಿಲ್ಲದಿರುವಾಗ Guilt Feel ಮಾಡಿಕೊಳ್ಳುವುದನ್ನು ಬಿಟ್ಟುಬಿಟ್ಟೆ.

ನನಗೆ ತಾವೊಯಿಸಂ ಮೇಲೆ ತುಂಬಾ ಆಸಕ್ತಿ ಇದೆ ಅಂತ ನಾನು ಈ ಹಿಂದೆ ಒಮ್ಮೆ ಹೇಳಿದ್ದೆ ಮತ್ತು ನಿಜವಾಗಿಯೂ, ನನ್ನನ್ನು Taoist philosophyಯನ್ನು ಪಾಲಿಸುವವಳು ಎಂದೂ ಹೇಳಬಹುದು. ತಾವೊಯಿಸಂನ ಅತ್ಯಂತ ಗೌರವಾನ್ವಿತ ಪುಸ್ತಕ Dao De Jingನ ಅತ್ಯಂತ ಪ್ರಸಿದ್ಧ ಉಕ್ತಿಗಳಲ್ಲಿ ಒಂದು ಹೀಗೆ ಇದೆ:"Thirty spokes gathered at each hub: absence makes the cart work. A storage jar fashioned out of clay: absence makes the jar work. Doors and windows cut in a house: absence makes the house work. Presence gives things their value, but absence makes them work". ಬೇರೆ ರೀತಿಯಲ್ಲಿ ಹೇಳುವುದಾದರೆ, ನಮ್ಮ ಜೀವನದಲ್ಲಿ ಸ್ವಲ್ಪ ಬಿಡುವಿನ ವೇಳೆ ಇಟ್ಟುಕೊಳ್ಳೋದು ನಮಗೇ ಒಳ್ಳೆಯದು, ಏಕೆಂದರೆ ಇದರಲ್ಲಿ ನಾವು ಯೋಚಿಸಬಹುದು, ಅನುಭವಿಸಬಹುದು ಮತ್ತು ನಾವು ನಾವೇ ಆಗಿರಬಹುದು. ನಮ್ಮೊಳಗಿನ ಎಲ್ಲಾ ಖಾಲಿ ಜಾಗ ತುಂಬಿಹೋದರೆ, ನಾವು ನಾವಾಗಿರಲು ನಮಗಾಗಿ ಯಾವುದೇ ಜಾಗ ಉಳಿಯೋದಿಲ್ಲ!

**◆ ರಷ್ಯಾದ ಜೊತೆಗಿನ ನಿಮ್ಮ ಅಂತರರಾಷ್ಟ್ರೀಯ ಸಂಬಂಧ ಬಲು ಸೂಕ್ಷ್ಮವಾದುದು. ರಷ್ಯಾ-ಉಕ್ರೇನ್ ಯುದ್ಧಕ್ಕೆ ಇರುವ ಸೋಷಿಯೊ ಪೊಲಿಟಿಕಲ್ ಕಾರಣಗಳನ್ನು ಒಬ್ಬ ಕವಿಯಾಗಿ ಹೇಗೆ ವಿಶ್ಲೇಷಿಸುತ್ತೀರಿ?**

ಈ ಅಂತರರಾಷ್ಟ್ರೀಯ ಸಂಬಂಧದ ಬಗ್ಗೆ ಮಾತನಾಡೋಕೆ 'ಸೂಕ್ಷ್ಮ' ಅನ್ನೋ ಪದವನ್ನು ನಾನು ಬಳಸೋದಿಲ್ಲ. ಬಾಂಬುಗಳಿಂದ ಕಟ್ಟಡಗಳನ್ನು ಮತ್ತು ದೇಹಗಳನ್ನು ತುಂಡು ತುಂಡು ಮಾಡೋದು ಸೂಕ್ಷ್ಮ ಅಲ್ಲ. ಸ್ಫೋಟಕಗಳನ್ನು ಹೊತ್ತೊಯ್ಯೋ ಡ್ರೋನ್ ಯಂತ್ರಗಳು ಸೂಕ್ಷ್ಮ ಅಲ್ಲ. ಟ್ಯಾಂಕರ್‌ಗಳು, ಮೆಷಿನ್ ಗನ್‌ಗಳು ಕೂಡ ಅಲ್ಲ. ಮನುಷ್ಯರೇ ಇತರ ಮನುಷ್ಯರ ಸ್ವತಂತ್ರ ಮತ್ತು ಸ್ವಾಧೀನವಾಗಿ ಬದುಕುವ ಹಕ್ಕನ್ನು ಒಪ್ಪಿಕೊಳ್ಳದೆ ಸಾಮೂಹಿಕ ನರಮೇಧಗಳನ್ನು ನಡೆಸುತ್ತಿರುವುದು ಖಂಡಿತವಾಗಿಯೂ ಸೂಕ್ಷ್ಮವಾದ ವಿಷಯವಲ್ಲ. ಬಹುತೇಕರ ಹಾಗೆ ನಾನೂ ಕೂಡ ಈ ಯುದ್ಧದಲ್ಲಿ ಆತ್ಮೀಯರನ್ನು ಮತ್ತು ಗೆಳೆಯರನ್ನು ಕಳೆದುಕೊಳ್ಳುವುದರಲ್ಲಿ ಯಾವುದೇ ಸೂಕ್ಷ್ಮತೆ ಇಲ್ಲ. ಆದಾಗ್ಯೂ, ಒಂದು ಅರ್ಥದಲ್ಲಿ, ಈ ಭಯಾನಕ ಯುದ್ಧದಲ್ಲಿ ಸಂತೋಷಪಡಬೇಕಾದ ಒಂದೇ ಒಂದು ವಿಷಯವೆಂದರೆ, ನಾವು ಹೂವಿನಂತಹ ಸೌಮ್ಯೋಕ್ತಿಗಳನ್ನು ಬಳಸುವ ಹಂತವನ್ನು ಮೀರಿ ನಿಂತು ವಿಷಯವನ್ನು ವಾಸ್ತವದ ನೆಲೆಗಟ್ಟಿನಲ್ಲಿ ಸಂಬೋಧಿಸಲು ಸಮರ್ಥರಾಗಿರುವುದು: ರಷ್ಯಾದ ಪರವಾಗಿ ನವ ವಸಾಹತುಶಾಹಿ ವಿಸ್ತರಣೆ, ಪ್ರಸ್ತುತ ರಷ್ಯಾದ ರಾಜಕೀಯ ಆಡಳಿತದ ದುರಾಶೆ ಮತ್ತು ಸರ್ವಾಧಿಕಾರಿ ಕ್ರೌರ್ಯದ ಫಲವೇ ಸಾವಿರಾರು ಮುಗ್ಧ ಉಕ್ರೇನಿಯನ್ ನಾಗರಿಕರ ಹತ್ಯೆ, ನೆಲಸಮವಾದ ಮನೆಗಳು ಮತ್ತು ಬದುಕುಗಳು. ಇತ್ತೀಚೆಗೆ ಓವಲ್ ಕಚೇರಿಯಲ್ಲಿ ನಡೆದ ವಿಫಲ ಮಾತುಕತೆಯಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿಗೆ 'holding all the cards' ಎಂದು ಹೇಳುತ್ತಲೇ ಇದ್ದಾಗ, ಇಬ್ಬರ ನಡುವಿನ ಈ ಸ್ಪಷ್ಟ ವ್ಯತ್ಯಾಸ ಬಯಲಾಯಿತು- ನೇರವಾಗಿ ಯುದ್ಧವನ್ನು ಅನುಭವಿಸದ ವ್ಯಕ್ತಿ (Trump) ಅದನ್ನು ಒಂದು ಭಯಾನಕ ಜೂಜಿನಂತೆ ಅಸ್ಪಷ್ಟವಾಗಿ ನೋಡಬಹುದು. ಅಲ್ಲಿ ಮನುಷ್ಯರ ಜೀವಗಳ ಮೇಲೆ ಪಂದ್ಯ ಕಟ್ಟಬಹುದು. ಆದರೆ, ಯುದ್ಧದಲ್ಲಿ ಅಳಿದುಳಿದು ಬದುಕುತ್ತಿರುವ ವ್ಯಕ್ತಿ (Zelensky) ಯಾವುದೇ ಮೃದು ಸೌಮ್ಯ ಪದಗಳ